<u>ದಿನಾಂಕಃ 12-06-2025 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>ಮುಖ್ಯ ವಿಚಾರಣೆಃ ಶ್ರೀ. ಆರ್. ಪಿ. ವಕೀಲರಿಂದಃ</u>

ನಾನು ಈ ಕೇಸಿನ ಅರ್ಜಿದಾರನಾಗಿದ್ದು, ನಾನು ಸಾಕ್ಷ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು, ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಮಾಹಿತಿಗಳು ಗೊತ್ತಿದ್ದು, ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿಗಳು ನನ್ನದೇ ಇರುತ್ತವೆ.

ಎಫ್.ಐ.ಆರ್., ನ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.1 ಎಂದು, ದೂರಿನ ದೃಢೀಕೃತ ನಕಲನ್ನು ನಿಪಿ.2 ಎಂದು, ಮಹಜರ್ ನ ದೃಢೀಕೃತ ನಕಲನ್ನು ನಿಪಿ.3 ಎಂದು, ಅಮಾನತ್ತು ಮಹಜರ್ ನ ದೃಢೀಕೃತ ನಕಲನ್ನು ನಿಪಿ.4 ಎಂದು, ಐ.ಎಂ.ವಿ. ವರದಿಯ ದೃಢೀಕೃತ ನಕಲನ್ನು ನಿಪಿ.5 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ.6 ಎಂದು, ಅಂತಿಮ ವರದಿ ಹಾಗೂ ಅದರ ಲಗತ್ತುಗಳನ್ನು ಒಟ್ಟಾಗಿ ನಿಪಿ.7 ಎಂದು, ಆಸ್ಪತ್ರೆಯ ಬಿಡುಗಡೆ ಪತ್ರವನ್ನು ನಿಪಿ.8 ಎಂದು, ವೈದ್ಯಕೀಯ ಬಿಲ್ ಗಳನ್ನು ನಿಪಿ.9 ರಿಂದ 26 ಎಂದು, ಔಷಧಿ ಚೀಟಿಗಳನ್ನು ನಿಪಿ.27 ರಿಂದ 37 ಎಂದು, ಆರ್.ಟಿ.ಸಿ., ಪಹಣಿಯನ್ನು ನಿಪಿ.38 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಸಾಕ್ಷಿದಾರರ ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ನಾಗಮಂಗಲ.